# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **951** |
| ಸದಸ್ಯರ ಹೆಸರು | ಶ್ರೀ ಕೆ ಹರೀಶ್ ಕುಮಾರ್ |
| ಉತ್ತರಿಸುವ ದಿನಾಂಕ | 13-12-2023 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಎಷ್ಟು ಶಾಲೆಗಳಿಗೆ ಮಧ್ಯಾಹ್ನದ ಬಿಸಿ ಊಟ, ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರಗಳನ್ನು ನೀಡಲಾಗುತ್ತಿದೆ. (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನಲ್ಲಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯದ ವತಿಯಿಂದ ಈ ಕೆಳಕಂಡ ಸಂಸ್ಥೆಗಳಿಗೆ ಮಧ್ಯಾಹ್ನದ ಬಿಸಿ ಊಟ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br><br>1. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು - ಪ್ರೌಢಶಾಲಾ ವಿಭಾಗ - 236 ವಿದ್ಯಾರ್ಥಿಗಳು.<br>2. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು - 786 ವಿದ್ಯಾರ್ಥಿಗಳು.<br>3. ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ - 484 ವಿದ್ಯಾರ್ಥಿಗಳು.<br>4. ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸುಬ್ರಹ್ಮಣ್ಯ - 236 ವಿದ್ಯಾರ್ಥಿಗಳು.<br>5. ಕುಮಾರಸ್ವಾಮಿ ವಿದ್ಯಾಲಯ - 923 ವಿದ್ಯಾರ್ಥಿಗಳು.<br><br>• ಮುಂದುವರೆದು, ಈ ಕೆಳಕಂಡ ಸಂಸ್ಥೆಗಳಿಗೆ ಪಠ್ಯ ಪುಸ್ತಕದ ವೆಚ್ಚ ಹಾಗೂ ಸಮವಸ್ತ್ರಗಳ ವೆಚ್ಚಗಳನ್ನು ಭರಿಸಲಾಗುತ್ತಿದೆ.<br><br>1. ಸರಸ್ವತಿ ವಿದ್ಯಾಲಯ, ಪಂಜ ರಸ್ತೆ, ಕಡಬ - 429 ವಿದ್ಯಾರ್ಥಿಗಳು.<br>2. ಶ್ರೀ ಭಾರತೀ ಹಿರಿಯ ಪ್ರಾಥಮಿಕ ಶಾಲೆ ಅಲಂಕಾರು ಕಡಬ ತಾಲೂಕು - 212 ವಿದ್ಯಾರ್ಥಿಗಳು.<br>3. ಶ್ರೀರಾಮ ವಿದ್ಯಾಲಯ, ನೆಲ್ಯಾಡಿ, ಪುತ್ತೂರು ತಾಲೂಕು - 251 ವಿದ್ಯಾರ್ಥಿಗಳು.<br><br>• ಅಲ್ಲದೆ, ಆನಂದಾಶ್ರಮ ಸೇವಾ ಟ್ರಸ್ಟ್ (ವೃದ್ಧಾಶ್ರಮ), ಪುತ್ತೂರು ಇಲ್ಲಿಗೆ ಪ್ರತೀ ತಿಂಗಳು, ಅಕ್ಕಿ ಮತ್ತು ತೊಗರಿ ಬೇಳೆಗಳನ್ನು ನೀಡಲಾಗುತ್ತಿದೆ. |

| | | |
|---|---|---|
| ಆ) | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಅನುದಾನದಲ್ಲಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟದ ಅನುದಾನ ಪಡೆಯುವ ಶಾಲೆಗಳನ್ನು ಯಾವ ಮಾನದಂಡದಡಿ ಗುರುತಿಸಲಾಗುತ್ತಿದೆ.? | ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತಕ್ಕೊಳಪಟ್ಟ ವಿದ್ಯಾಸಂಸ್ಥೆಗಳಾದ ಈ ಕೆಳಕಂಡ ವಿದ್ಯಾಸಂಸ್ಥೆಗಳಿಗೆ ಸದರಿ ದೇವಾಲಯದ ಆಡಳಿತ ಮಂಡಳಿಯ ತೀರ್ಮಾನದಂತೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲಾಗುತ್ತಿದೆ.<br><br>1. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು - ಪ್ರೌಢಶಾಲಾ ವಿಭಾಗ.<br>2. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು, ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ.<br>3. ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸುಬ್ರಹ್ಮಣ್ಯ.<br><br>ಸರ್ಕಾರದ ಆದೇಶ ಸಂಖ್ಯೆ: ಕಂಇ 47 ಮುಅಬಿ 2015, ದಿನಾಂಕ:28.06.2016 ಮತ್ತು ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ ಎ.ಡಿ.ಎಂ.:4/ ಸಿ.ಆರ್.:386/2012-13, ದಿನಾಂಕ:12-07-2016 ರನ್ವಯ ಸ್ಥಳೀಯ ಖಾಸಗೀ ವಿದ್ಯಾಸಂಸ್ಥೆ ಕುಮಾರಸ್ವಾಮಿ ವಿದ್ಯಾಲಯಕ್ಕೆ ಮಧ್ಯಾಹ್ನದ ಬಿಸಿಯೂಟವನ್ನು ಒದಗಿಸಲಾಗುತ್ತಿದೆ.<br><br>ಸರ್ಕಾರದ ಆದೇಶ ಸಂಖ್ಯೆ, ಕಂಇ 85 ಮುಸೇವಿ 2020, ದಿನಾಂಕ 17-10-2020 ಹಾಗೂ ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯ ಪತ್ರ ಸಂಖ್ಯೆ ಎ.ಡಿ.ಎಂ.:1/ಸಿ.ಆರ್:78/2020-21,ದಿ:12.11.2020ರ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲ್ಲೂಕಿನ ಸರಸ್ವತಿ ವಿದ್ಯಾಲಯ, ಅಲಂಕಾರು ಭಾರತಿ ವಿದ್ಯಾಲಯ, ನೆಲ್ಯಾಡಿ ಶ್ರೀರಾಮ ಶಾಲೆ ಮಕ್ಕಳಿಗೆ ಪ್ರತೀ ತಿಂಗಳು ಬಿಸಿಯೂಟಕ್ಕೆ ಬೇಕಾದ ದಿನಸಿ ಸಾಮಾಗ್ರಿ (ಅಕ್ಕಿ, ತೊಗರಿ ಬೇಳೆ, ತೆಂಗಿನ ಎಣ್ಣೆ, ಉಪ್ಪು) ಗಳನ್ನು ಮತ್ತು ಪಠ್ಯ ಪುಸ್ತಕದ ವೆಚ್ಚ ಹಾಗೂ ಸಮವಸ್ತ್ರಗಳ ವೆಚ್ಚಗಳನ್ನು ವರ್ಷಕ್ಕೊಮ್ಮೆ ದೇವಾಲಯದ ನಿಧಿಯಿಂದ ನೀಡಲಾಗುತ್ತಿದೆ.<br><br>ಧಾರ್ಮಿಕ ದತ್ತಿ ಆಯುಕ್ತರ ಕಛೇರಿಯ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ.ಡಿ.ಎಂ.:1(ಎ)/ ಸಿ.ಆರ್.: 465/07-08, ದಿನಾಂಕ:24-04-2008ರ ಆದೇಶದಂತೆ ಆನಂದಾಶ್ರಮ ಸೇವಾ ಟ್ರಸ್ಟ್ (ವೃದ್ಧಾಶ್ರಮ), ಪುತ್ತೂರು ಇಲ್ಲಿಗೆ ಪ್ರತೀ ತಿಂಗಳು, ಅಕ್ಕಿ: 250 ಕೆ.ಜಿ.; ತೊಗರಿ ಬೇಳೆ: 30 ಕೆ.ಜಿ.ಗಳನ್ನು ನೀಡಲಾಗುತ್ತಿದೆ. |

| | | |
|---|---|---|
| ಇ) | ಈ ಶಾಲೆಗಳಿಗೆ ಬಿಸಿ ಊಟ ಯಾವ ರೂಪದಲ್ಲಿ ಹಂಚಿಕೆಯಾಗುತ್ತಿದೆ? | ಸದರಿ ದೇವಾಲಯದ ಆಡಳಿತಕ್ಕೊಳಪಟ್ಟ ವಿದ್ಯಾಸಂಸ್ಥೆಗಳಾದ ಈ ಕೆಳಕಂಡ ಸಂಸ್ಥೆಗಳಿಗೆ ದೇವಾಲಯಕ್ಕೆ ಆಗಮಿಸುವ ಭಕ್ತಾದಿಗಳ ಅನ್ನಸಂತರ್ಪಣೆಗೆ ತಯಾರಿಸಲ್ಪಡುವ ಪ್ರಸಾದ ಭೋಜನವನ್ನೇ ಸದರಿ ವಿದ್ಯಾಸಂಸ್ಥೆಗಳಿಗೆ ಬಿಸಿಯೂಟ ರೂಪದಲ್ಲಿ ನೀಡಲಾಗುತ್ತಿದೆ.<br><br>1. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು - ಪ್ರೌಢಶಾಲಾ ವಿಭಾಗ.<br>2. ಶ್ರೀ ಸುಬ್ರಹ್ಮಣ್ಯೇಶ್ವರ ಪದವಿಪೂರ್ವ ಕಾಲೇಜು, ಕುಕ್ಕೆ ಶ್ರೀ ಸುಬ್ರಹ್ಮಣ್ಯೇಶ್ವರ ಮಹಾವಿದ್ಯಾಲಯ.<br>3. ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಸುಬ್ರಹ್ಮಣ್ಯ. |
| ಈ | ಇತರ ಖಾಸಗಿ ಶಾಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸುವ ಅವಕಾಶವಿದೆಯೇ? | ಇತರ ಖಾಸಗಿ ಶಾಲೆಗಳಿಗೂ ಈ ಯೋಜನೆಯನ್ನು ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಕಂಇ 129 ಮುಸಪ್ರ 2023

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು